**ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 21-06-2023.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ವಿ ಎನ್ ಪಿ ವಕೀಲರಿಂದಃ**

1. ನಾನು ಎಲ್ಲಾ ವಾದಿಯರ ಪರವಾಗಿಯು ಸಾಕ್ಷಿಯನ್ನು ನುಡಿಯುತ್ತಿದ್ದೆನೆ. ಉಳಿದ ವಾದಿಯರು ನನಗೆ ತಮ್ಮ ಪರವಾಗಿ ಸಾಕ್ಷಿ ಹೇಳಲು ಅಧಿಕಾರ ಪತ್ರ ಬರೆದುಕೊಟ್ಟಿಲ್ಲ. ಅವರು ನನಗೆ ಮೌಖಿಕವಾಗಿ ಸಾಕ್ಷಿ ಹೇಳಲು ಹೇಳಿಲ್ಲ. ನಾನು ಉಳಿದ ವಾದಿಯರಿಗೆ ಅವರ ಪರ ಸಾಕ್ಷಿ ಹೇಳುತ್ತಿದ್ದೆನೆ ಎಂದು ತಿಳಿಸಿದ್ದೆನೆ. ನನಗೆ ಕನ್ನಡ ಭಾಷೆ ಬರುವುದಿಲ್ಲ. ನಾನು ಉಳಿದ ವಾದಿಯರಿಗೆ ಅವರ ಪರ ಸಾಕ್ಷಿ ಹೇಳುತ್ತಿದ್ದೆನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಹೊನ್ನಪ್ಪ ರವರಿಗೆ ಐದು ಜನ ಮಕ್ಕಳು ಎಂದು ತೋರಿಸಲು ವಂಶಾವಳಿ ಹಾಜರು ಮಾಡಿಲ್ಲ ಆದರೆ ಉತಾರದಲ್ಲಿ ಅವರುಗಳ ಹೆಸರು ಇರುವುದರಿಂದ ವಾದ ಪತ್ರದಲ್ಲಿ ವಂಶಾವಳಿಯಲ್ಲಿ ಬರೆಸಿದ್ದೆನೆ. ಹೊನ್ನಪ್ಪರವರಿಗೆ ಹೆಣ್ಣು ಮಕ್ಕಳು ಇರಲಿಲ್ಲ. ಹೊನ್ನಪ್ಪರವರಿಗೆ ಹಿರಿಯ ಮಗ ಅಪ್ಪಣ್ಣ ನಂತರ ಯಲ್ಲಪ್ಪ, ರಾವಜಿ, ಬಾಬು ಮತ್ತು ಪರಶುರಾಮ ಮಕ್ಕಳು. ಅಪ್ಪಣ್ಣ ಮತ್ತು ಯಲ್ಲಪ್ಪರವರು ಯಾವಾಗ ತೀರಿಕೊಂಡಿದ್ದಾರೆ ಗೊತ್ತಿಲ್ಲ. ರಾವಜಿ ರವರು 1989 ರಲ್ಲಿ , ಬಾಬು ರವರು 1988 ರಲ್ಲಿ ಮತ್ತು ಪರಶುರಾಮ ರವರು 1991 ಅಥವಾ 1993 ರಲ್ಲಿ ತೀರಿಕೊಂಡಿದ್ದಾರೆ. ನನಗೆ ಮರಣದ ವರ್ಷಗಳು ನಿಖರವಾಗಿ ಗೊತ್ತಿರಲಿಲ್ಲ ಆದ್ದರಿಂದ ವಂಶಾವಳಿಯಲ್ಲಿ ಅದರ ಬಗ್ಗೆ ಸೂಚಿಸಿಲ್ಲ. ಮಲ್ಲಾರಿ ಹಾಗೂ ಗಾವಡು ಯಾವ ವರ್ಷದಲ್ಲಿ ತೀರಿಕೊಂಡಿದ್ದಾರೆ ನನಗೆ ಹೇಳಲು ಬರುವುದಿಲ್ಲ. ಮಲ್ಹಾರಿರವರಿಗೆ ಗಂಡು ಸಂತಾನ ಇಲ್ಲ 6 ಜನ ಹೆಣ್ಣು ಮಕ್ಕಳು. ಮಲ್ಹಾರಿ ರವರ ಹೆಂಡತಿ ಹೆಸರು ಗೋಪಿಕಾ. ಗೋಪಿಕಾರವರು ಯಾವಾಗ ಮರಣ ಹೊಂದಿದ್ದಾರೆ ಗೊತ್ತಿಲ್ಲ. ನಾನು ಮಲ್ಹಾರಿ ರವರ

ವಾರಸುದಾರರ ಬಗ್ಗೆ ಸುಳ್ಳು ವಿವರಣೆ ಕೊಟ್ಟಿದ್ದೆನೆ ಎಂದರೆ ಸರಿಯಲ್ಲ. ಮಲ್ಹಾರಿ ರವರಿಗೆ ಸದರಿ ರವರು ವಾರಸುದಾರರು ಎಂದು ತೋರಿಸಲು ದಾಖಲೆ ಹಾಜರು ಮಾಡಿಲ್ಲ. ಸಾಕ್ಷಿಯು ಮುಂದುವರೆದು ದಾಖಲು ಹಾಜರು ಮಾಡಿದ್ದೆನೆ ಎಂದು ಹೇಳುತ್ತಾರೆ. ಸದರಿ 6 ಜನ ಹೆಣ್ಣು ಮಕ್ಕಳ ಹೆಸರು ಇರುವ ದಾಖಲೆ ಹಾಜರು ಮಾಡಿದ್ದೆನೆ.

2. ಯಲ್ಲಪ್ಪರವರಿಗೆ ಒಬ್ಬ ಮಗ ಹಾಗೂ ಒಬ್ಬ ಹೆಣ್ಣು ಮಗಳು. ಹೆಣ್ಣು ಮಗಳ ಹೆಸರು ಕೃಷ್ಣಾಬಾಯಿ. ಕೃಷ್ಣಾಬಾಯಿರವರು ಜೀವಂತ ಇಲ್ಲ. ಸದರಿ ಕೃಷ್ಣಾಬಾಯಿರವರಿಗೆ ಇಬ್ಬರು ಗಂಡು ಮಕ್ಕಳು ಹಾಗೂ ಮೂವರು ಹೆಣ್ಣು ಮಕ್ಕಳು. ಅವರ ಹೆಸರುಗಳು ಮಹಾದೇವ, ಗಂಗಾರಾಮ. ಹೆಣ್ಣು ಮಕ್ಕಳ ಹೆಸರು ಗೊತ್ತಿಲ್ಲ. ಕೃಷ್ಣಾಬಾಯಿರವರ ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ನಿಜ. ರಾವಜಿರವರಿಗೆ ಐದು ಜನ ಗಂಡು ಮಕ್ಕಳು, ಅವರ ಹೆಣ್ಣು ಮಕ್ಕಳ ಹೆಸರು ಗೊತ್ತಿಲ್ಲ ಗಂಡು ಮಕ್ಕಳ ಹೆಸರು ಗೊತ್ತು. ರಾವಜಿರವರಿಗೆ ಎಷ್ಟು ಜನ ಹೆಣ್ಣು ಮಕ್ಕಳು ನನಗೆ ಗೊತ್ತಿಲ್ಲ. ರಾವಜಿರವರ ಹೆಣ್ಣು ಮಕ್ಕಳು ಎಲ್ಲಿ ಇರುತ್ತಾರೆ ಹಾಗೂ ಅವರ ವಿವರಣೆ ಗೊತ್ತು. ನನಗೆ ರಾವಜಿ ರವರ ಹೆಣ್ಣು ಮಕ್ಕಳ ಬಗ್ಗೆ ಗೊತ್ತಿದ್ದರು ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿಯು ಅವರ ಹೆಸರುಗಳು ಗೊತ್ತಿಲ್ಲ ಆದರೆ ಅವರು ಎಲ್ಲಿ ಇರುತ್ತಾರೆ ಎಂದು ಗೊತ್ತು ಎಂದು ಹೇಳುತ್ತಾರೆ. ನಾಗೊ ರವರಿಗೆ ಒಬ್ಬ ಗಂಡು ಮಗ ಹಾಗೂ ಇಬ್ಬರು ಹೆಣ್ಣು ಮಕ್ಕಳು. ಮಗನ ಹೆಸರು - ಮನೋಹರ , ಹೆಣ್ಣು ಮಕ್ಕಳು ನರ್ಮದಾ ಹಾಗೂ ಕೌಶಲ್ಯಾ. ಮನೋಹರ ತೀರಿಕೊಂಡಿದ್ದಾರೆ. ಮನೋಹರರವರಿಗೆ ಇಬ್ಬರು ಗಂಡು ಮಕ್ಕಳು. ಅವರ ಹೆಸರು ಗೊತ್ತಿಲ್ಲ. ಮನೋಹರರವರ ಹೆಂಡತಿ ಹೆಸರು

ದೇಸೂರ ಗ್ರಾಮದಲ್ಲಿ ಇದ್ದಾರೆ. ಅವರು ಜೀವಂತ ಇದ್ದಾರೆ. ಮನೋಹರವರ ಹೆಣ್ಣು ಮಕ್ಕಳ ಬಗ್ಗೆ ನಾನು ಪರಿಶೀಲನೆ ಮಾಡಿಲ್ಲ. ನಾನು ಮನೋಹರರವರ ಮಕ್ಕಳನ್ನು ಈಗಾಗಲೆ ಸೇರಿಸಿಲ್ಲ ಎಂದರೆ ನಿಜ. ರಾವಜಿ ರವರ ಮಗ ಲಕ್ಷ್ಮಣ ತೀರಿಕೊಂಡಿದ್ದಾರೆ ಅವರಿಗೆ ಇಬ್ಬರು ಗಂಡು ಮಕ್ಕಳು ಹಾಗೂ ಒಬ್ಬ ಹೆಣ್ಣು ಮಗಳು.  ಹೆಣ್ಣು ಮಗಳ ಹೆಸರು ಶ್ರೀಮಂತಿ. ಶ್ರೀಮಂತಿರವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ನಿಜ. ಲಕ್ಷ್ಮಣರವರ ಹೆಂಡತಿ- ಆನಂದಿಬಾಯಿ ಜೀವಂತ ಇದ್ದಾರೆ.  ಅವರನ್ನು ಸಹ ಈ ದಾವೆಯಲ್ಲಿ ಸೇರಿಸಿಲ್ಲ.

3. ಹೊನ್ನಪ್ಪರವರ ಮಗ ಬಾಬುರವರಿಗೆ 4 ಜನ ಗಂಡು ಮಕ್ಕಳು ಹಾಗೂ 5 ಜನ ಹೆಣ್ಣು ಮಕ್ಕಳು.  ಸದರಿ ಬಾಬುರವರ ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿದ್ದೆವೆ. ಹೊನ್ನಪ್ಪರವರ ಮಗ ಪರಶುರಾಮರವರಿಗೆ ಇಬ್ಬರು ಗಂಡು ಮಕ್ಕಳು ಹಾಗೂ ಮೂರು ಜನ ಹೆಣ್ಣು ಮಕ್ಕಳು.  ಪ್ರತಿವಾದಿ ನಂ.7 ರಿಂದ 9 ಅವರ ಹೆಣ್ಣು ಮಕ್ಕಳು.  ಯಳ್ಳೂಬಾಯಿ ತೀರಿಕೊಂಡಿದ್ದಾರೆ. ಯಳ್ಳೂಲೂಬಾಯಿರವರಿಗೆ ಒಬ್ಬ ಗಂಡು ಮಗ, ಹಾಗೂ ಒಬ್ಬ ಹೆಣ್ಣು ಮಗಳು. ಹೆಣ್ಣು ಮಗಳು ತೀರಿಕೊಂಡಿದ್ದಾರೆ.  ಯಳ್ಳೂಬಾಯಿರವರ ಹೆಣ್ಣು ಮಗಳು ಯಾವ ವರ್ಷದಲ್ಲಿ ತೀರಿಕೊಂಡಿದ್ದಾರೆ ಗೊತ್ತಿಲ್ಲ.  ಯಳ್ಳೂಬಾಯಿರವರ ಹೆಣ್ಣು ಮಗಳ ವಾರಸುದಾರರ ಬಗ್ಗೆ ನನಗೆ ಗೊತ್ತಿಲ್ಲ. ಯಳ್ಳೂಬಾಯಿರವರ ಹೆಣ್ಣು ಮಗಳ ವಾರಸುದಾರರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿಯು ಅವರ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.  ನಾನು ವಾದ ಪತ್ರದಲ್ಲಿ ಅಪೂರ್ಣ ವಂಶಾವಳಿ ತೋರಿಸಿದ್ದೆನೆ  ಹಾಗೂ ಸುಳ್ಳು ವಂಶಾವಳಿಯನ್ನು ತೋರಿಸಿದ್ದೆನೆ ಎಂದರೆ ಸರಿಯಲ್ಲ.

4. ದಾವೆಯ ಎಲ್ಲಾ ಆಸ್ತಿಗಳು ನಮ್ಮ ಪೂರ್ವಜರ ಆಸ್ತಿ. ದಾವಾ ಆರ್ ಎಸ್ ನಂ.2 ನಮ್ಮ ಅಜ್ಜನ ಹೆಸರಿನಲ್ಲಿ ಇತ್ತು. ಸದರಿ ಆಸ್ತಿ ನಮ್ಮ ಅಜ್ಜನ ಹೆಸರಿನಲ್ಲಿ ಇದೆ ಎಂದು ತೋರಿಸಲು ಉತಾರ ಹಾಜರ ಮಾಡಿದ್ದೆನೆ. ನಾನು 1951ರ ಪಹಣಿ ಹಾಜರು ಮಾಡಿದ್ದೆನೆ. ಆರ್ ಎಸ್ ನಂ.2 ರಲ್ಲಿ ಎಲ್ಲಾ ಶಾಖೆಗೂ ತಲಾ 2 ಎಕರೆ ಜಮೀನು ಇದೆ ಎಂದರೆ ನಿಜ. ತಲಾ ಎರಡು ಎಕರೆ ಜಮೀನು ಸಾಗುವಳಿ ಮಾಡುತ್ತಿದ್ದೆವೆ ಆದರೆ ಸರ್ವೆ ಆಗಿಲ್ಲ, ಪೂಡಿ ಆಗಿಲ್ಲ ಎಂದು ಹೇಳುತ್ತಾರೆ. ಸುಮಾರು 50 ವರ್ಷಗಳಿಂದ ಎಲ್ಲರೂ ತಮ್ಮ ತಮ್ಮ ಪಟ್ಟಿಯಂತೆ ಸಾಗುವಳಿ ಮಾಡುತ್ತಿದ್ದಾರೆ. ಹೊನ್ನಪ್ಪರವರ ಜೀವಂತ ಕಾಲದಲ್ಲಿ ಆರ್ ಎಸ್ ನಂ.2 ರ ಜಮೀನಿನಲ್ಲಿ ಪಾಲು ಆಗಿದೆ ಎಂದರೆ ಸರಿಯಲ್ಲ. ಆರ್ ಎಸ್ ನಂ.26/2 ಜಮೀನು ಮೃತ ಬಾಬು ಹಾಗೂ ಮೃತ ಪರಶುರಾಮ ಖರೀದಿಸಿದ ಆಸ್ತಿ ಎಂದರೆ ಸರಿಯಲ್ಲ. ಮೃತ ಬಾಬು ಹಾಗೂ ಪರಶುರಾಮರವರು ಖರೀದಿಸಿದ ದಿನಾಂಕದಿಂದ ಅವರ ಹೆಸರಿನಲ್ಲಿ ಆರ್ ಎಸ್ ನಂ.26/2 ಜಮೀನು ಇದ್ದು ಅವರೆ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ನಮ್ಮ ಅಜ್ಜ ಸಾಗುವಳಿ ಮಾಡುತ್ತಿದ್ದರು ಎಂದು ಹೇಳುತ್ತಾರೆ. ನಮ್ಮ ಅಜ್ಜ ಸಾಗುವಳಿ ಮಾಡುತ್ತಿದ್ದರು ಎಂದು ತೋರಿಸಲು ದಾಖಲೆ ಹಾಜರ ಮಾಡಿದ್ದೆನೆ. ಉತಾರ ಹಾಜರ ಮಾಡಿದ್ದೆನೆ. ಆರ್ ಎಸ್ ನಂ.26/2 ಮೃತ ಬಾಬು ಹಾಗೂ ಪರಶುರಾಮ ಖರೀದಿಸಿದ ಆಸ್ತಿ, ಖರೀದಿ ಪತ್ರದಲ್ಲಿ ಅವರ ಹೆಸರುಗಳು ಇವೆ ನಿಮ್ಮ ಅಜ್ಜನ ಹೆಸರಿನಲ್ಲಿ ಎಂದು ಸರ್ವೆ ನಂ.26/2 ಜಮೀನು ಇರಲಿಲ್ಲ ಹಾಗೂ ನಿಮಗೆ ಸದರಿ ಜಮೀನಿನಲ್ಲಿ ಪಾಲು ಹಕ್ಕು ಇಲ್ಲ ಎಂದರೆ ಸಾಕ್ಷಿಯು ನಮ್ಮ ಅಜ್ಜನಿಗೆ ಸೇರಿದ ಆಸ್ತಿ ಇದೆ ಎಂದು ಹೇಳುತ್ತಾರೆ. ಆರ್ ಎಸ್ ನಂ.26/2 ಮೃತ ಬಾಬು ಹಾಗೂ ಪರಶುರಾಮರವರ

ಹೆಸರಿನಲ್ಲಿ ಇರುವುದನ್ನು ಪ್ರಶ್ನಿಸಿದ್ದಿರಾ ಎಂದರೆ ಸಾಕ್ಷಿಯು ನಮ್ಮ ತಂದೆಯ ಹೆಸರು ಸಹ ಇತ್ತು ಆದ್ದರಿಂದ ಪ್ರಶ್ನಿಸಿಲ್ಲ ಎಂದು ಹೇಳುತ್ತಾರೆ. ಸದರಿ ಆರ್ ಎಸ್ ನಂ.26/2 ಮೃತ ಬಾಬು ಹಾಗೂ ಪರಶುರಾಮರವರ ಹೆಸರಿನಲ್ಲಿ ಎಮ್ ಇ ನಂ.117 ರಲ್ಲಿ ದಿಃ 05-08-1947 ರಲ್ಲಿ ದಾಖಲು ಆಗಿದೆ ಎಂದರೆ ಅದು ನನಗೆ ಗೊತ್ತಿಲ್ಲ. ಆರ್ ಎಸ್ ನಂ.26/2 ನಮಗೆ ಸಂಬಂಧ ಇಲ್ಲ, ಮೃತ ಬಾಬು ಹಾಗೂ ಪರಶುರಾಮವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನಮ್ಮ ಅಜ್ಜನ ಜೀವಂತ ಕಾಲದಲ್ಲಿ ಪಾಲುವಾಟ್ನಿ ಆಗಿದೆ ಎಂದರೆ ಸರಿಯಲ್ಲ. ಆರ್ ಎಸ್ ನಂ.26/2 ಎಂದಿಗೂ ನಮ್ಮ ಕಬ್ಜೆಯಲ್ಲಿ ಇರಲಿಲ್ಲ ನಮ್ಮ ಒಟ್ಟು ಕುಟುಂಬಂದ ಆಸ್ತಿ ಅಲ್ಲ ಅಂದರೆ ಸರಿಯಲ್ಲ.

5. ಆರ್ ಎಸ್ ನಂ.3 ರೈತಾಪಿನಾತೆಯಿಂದ ಬಾಬುರಾವರಿಗೆ ಮಂಜೂರು ಆದ ಜಮೀನು ಎಂದರೆ ಸಾಕ್ಷಿಯು ಬಾಬುರವರು ಮಾಡುತ್ತಿದ್ದರು ಎಂದು ಹೇಳುತ್ತಾರೆ. ಬಾಬುರವರು ನಮ್ಮ ತಂದೆ ವಿರುದ್ಧ 1962 ರಲ್ಲಿ ಎರಡನೇ ಹೆಚ್ಚುವರಿ ಜ್ವಾಯಿಂಟ್ ಮುನ್ಸಿಪ ನ್ಯಾಯಲಯ ಬೆಳಗಾವಿಯಲ್ಲಿ ಸಿವಿಲ್ ದಾವಾ ನಂ. 284/1962 ಸಲ್ಲಿಸಿದ್ದರು ಅಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಆರ್ ಎಸ್ ನಂ.3 ರಲ್ಲಿ ನಮ್ಮ ತಂದೆಗೆ ಯಾವುದೇ ರೀತಿಯ ಸಂಬಂಧ ಹಕ್ಕು ಇಲ್ಲ ಎಂದು ನಿರ್ಣಯ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸಿವಿಲ್ ದಾವಾ ನಂ. 284/1962 ರ ತೀರ್ಪು ಪ್ರಶ್ನಿಸಿ ನಮ್ಮ ತಂದೆ ಸಿವಿಲ್ ಅಪೀಲು ನಂ.333/1964 ಎರಡನೇ ಹೆಚ್ಚು ಜಿಲ್ಲಾ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪೀಲು 1968 ರಲ್ಲಿ ವಜಾವಾಗಿದೆ ಎಂದರೆ

ನನಗೆ ಗೊತ್ತಿಲ್ಲ. ಬಾಬುರವರು ಸದರಿ ಆರ್ ಎಸ್ ನಂ.3 ಜಮೀನು ರೈತಾಪಿನಾತೆಯಿಂದ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಬಾಬುರವರು ಭೂ ನ್ಯಾಯ ಮಂಡಳಿಗೆ ತಾನು ಬಹಳ ದಿನಗಳಿಂದ ಜಮೀನು ರೈತಾಪಿನಾತೆಯಿಂದ ಉಳುಮೆ ಮಾಡುತ್ತಿದ್ದೆನೆ ಎಂದು ಅರ್ಜಿಸಲ್ಲಿಸಿದ್ದರು ಎಂದರೆ ಸರಿಯಲ್ಲ. ಭೂ ನ್ಯಾಯ ಮಂಡಳಿಯಲ್ಲಿ ದಿನಾಂಕ 07-02-1976 ರಲ್ಲಿ ಭೂ ನ್ಯಾಯ ಮಂಡಳಿಯು ಬಾಬುರವರಿಗೆ ಅಧಿಬೋಗದಾರಿಕೆ ಹಕ್ಕು ಮಂಜೂರು ಮಾಡಿತ್ತು ಎಂದರೆ ಸರಿಯಲ್ಲ. ಬಾಬು, ರಾವಜಿ ಹಾಗೂ ಪರಶುರಾಮ ರವರಿಗೆ ಭೂ ನ್ಯಾಯ ಮಂಡಳಿ ಆರ್ ಎಸ್ ನಂ.3 ನ್ನು ಮಂಜೂರು ಮಾಡಿದೆ ಎಂದರೆ ಸರಿಯಲ್ಲ. ಸದರಿ ಆರ್ ಎಸ್ ನಂ.3 ಮಂಜೂರು ಆದುದ್ದನ್ನು ಪ್ರಶ್ನಿಸಿ ನಿಮ್ಮ ತಂದೆ ಅವರ ಉಳಿಕೆ ಸಹೋದರ ಹಾಗೂ ನೀವು ಅರ್ಜಿ ಸಲ್ಲಿಸಿದ್ದಿರಾ ಎಂದರೆ ಸಾಕ್ಷಿಯು ಈ ದಾವೆಯಲ್ಲಿ ಅದನ್ನು ಪ್ರಶ್ನಿಸಿದ್ದೆನೆ ಎಂದು ಹೇಳುತ್ತಾರೆ. ಆರ್ ಎಸ್ ನಂ.3 ರಲ್ಲಿ ನಮಗೆ ಪಾಲು ಹಕ್ಕು ಇಲ್ಲ ಬಾಬು, ರಾವಜಿ ಹಾಗೂ ಪರಶುರಾಮರವರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲನ್ನು ಪ್ರತಿವಾದಿ ಪರ ವಕೀಲರ ವಿನಂತಿಯ ಮೇರೆಗೆ ಮುಂದುಡಲಾಯಿತು.**

**( ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ ಸಿ,**
**ಖಾನಾಪೂರ .**